**ಕರ್ನಾಟಕ ಸರ್ಕಾರ**

ಸಂಖ್ಯೆ: ಆಇ 05 ಬಿಪಿಇ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:30.09.2019

**ಸುತ್ತೋಲೆ**

ವಿಷಯ: 2019–20ನೇ ಸಾಲಿನಲ್ಲಿ ವೇತನ ವೆಚ್ಚಗಳನ್ನು ಆಯವ್ಯಯ ನಿಯಂತ್ರಣಕ್ಕೊಳಪಡಿಸದಿರುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂ:ಎಫ್.ಡಿ.1 ಟಿ.ಎಫ್.ಪಿ 2019, ದಿ:04/7/2019

2. ಸಮ ಸಂಖ್ಯೆ ಸುತ್ತೋಲೆ ದಿನಾಂಕ:01.08.2019.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ ಹಾಗೂ ಉಲ್ಲೇಖ (2)ರ ಸುತ್ತೋಲೆಯಲ್ಲಿ ಲೇಖಾನುದಾನದ ಮಿತಿಗೊಳಪಟ್ಟು ಹಣವನ್ನು ಬಿಡುಗಡೆ ಮಾಡಲು ಎಲ್ಲಾ ಇಲಾಖೆಗಳಿಗೆ ಸೂಚಿಸಲಾಗಿತ್ತು. 2019–20ನೇ ಸಾಲಿಗೆ ಆಯವ್ಯಯದ ಶೇ.58ರಷ್ಟು ವೆಚ್ಚ ಮಾಡಲು ಅನುಮೋದನೆ ದೊರೆತಿರುವುದರಿಂದ ಹಾಗೂ 2019–20ನೇ ಸಾಲಿನಿಂದ ಎಲ್ಲಾ ಇಲಾಖೆಗಳು ಖಜಾನೆ–2ರಲ್ಲಿ ನಿರ್ವಹಿಸುತ್ತಿರುವುದರಿಂದ ಆಯವ್ಯಯ ನಿಯಂತ್ರಣದಿಂದಾಗಿ ವೇತನಕ್ಕೆ ಕೊರತೆಯಾಗುತ್ತಿರುವುದು ಆರ್ಥಿಕ ಇಲಾಖೆಯ ಗಮನಕ್ಕೆ ಬಂದಿರುತ್ತದೆ.

ಆದ್ದರಿಂದ, ಎಲ್ಲಾ ಆಡಳಿತ ಇಲಾಖೆಗಳು ವೇತನ ಶೀರ್ಷಿಕೆಗಳಾದ 002, 003, 011, 014, 020, 033 ಹಾಗೂ 034 ಗಳಡಿ ಲೇಖಾನುದಾನದ ಮಿತಿಗೊಳಪಡಿಸದೇ ಅನುದಾನವನ್ನು ತಮ್ಮ ಅಧೀನ ಇಲಾಖೆಗಳಿಗೆ ಬಿಡುಗಡೆ ಮಾಡಲು, ಆಡಳಿತ ಇಲಾಖೆಯ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಯವರಿಗೆ ತಿಳಿಸಿದೆ. ಆದರೆ, ಒಟ್ಟಾರೆ ಬೇಡಿಕೆಯಡಿ ಲೇಖಾನುದಾನ ಮಿತಿಯನ್ನು ಕಾಯ್ದುಕೊಳ್ಳಲು ತಿಳಿಸಿದೆ.

30/9/19

(ಹೆಚ್.ಎ.ಶೋಭ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಎಫ್ಆರ್&ಬಿಸಿಸಿ).

ಇವರಿಗೆ:–

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು.
2. ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.
3. ಆರ್ಥಿಕ ಇಲಾಖೆಯ ಎಲ್ಲಾ ಅಪರ/ಜಂಟಿ/ಉಪ ಕಾರ್ಯದರ್ಶಿಗಳು/ವಿಶೇಷಾಧಿಕಾರಿಗಳು/ಅಧೀನ ಕಾರ್ಯದರ್ಶಿಗಳು.
4. ಶಾಖಾ ರಕ್ಷಾ ಕಡತ.